ಶ್ರೀ ಎಸ್.ಟಿ. ಸೋಮಶೇಖರ್: 94 ಲಕ್ಷ ₹ ಗಳನ್ನು Bangalore Development Authority ಗೆ ಕಟ್ಟಬೇಕಾಗಿದೆ.

ಅಧ್ಯಕ್ಷರು: 94 ಲಕ್ಷ ₹ ಗಳನ್ನು ಕಟ್ಟುವ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಬಿಡಿಎ ಏನೊಂದು ಹಣವನ್ನು ಕಟ್ಟಬೇಕಾಗಿದೆಯೋ, ಅದನ್ನು ಆದಷ್ಟು ಬೇಗನೆ ಕಟ್ಟಿಸಿಕೊಡತಕ್ಕ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು: ಓಕೆ.

ಶ್ರೀ ಎಸ್.ಟಿ. ಸೋಮಶೇಖರ್: ಬಿಡಿಎ ನವರು ಸಿಎ ಸೈಟ್ ಅಲಾಟ್‌ಮೆಂಟ್ ಮಾಡಿ ನಾಲ್ಕು ವರ್ಷಗಳಾಯಿತು. ಅದನ್ನು ಬಿಡಿಎ ನವರು ಇನ್ನೂ ಉಳಿಸಿಕೊಳ್ಳುತ್ತಾರೆಯೇ?

ಅಧ್ಯಕ್ಷರು: ಈಗ ಸದನದ ಮುಂದೆ ಮೊದಲನೇ ಸಲ ಪ್ರಸ್ತಾಪವಾಗಿದೆ. ಆ ದುಡ್ಡನ್ನು ಶೀಘ್ರವಾಗಿ ಕಟ್ಟುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಅಧ್ಯಕ್ಷರು: ಮುಂದಿನ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪಿಸಬೇಕಾದ ಮಾನ್ಯ ಅಶ್ವತ್ಥನಾರಾಯಣರವರು ಸದನದಲ್ಲಿ ಇಲ್ಲ. ಮುಂದಿನ ಗಮನ ಸೆಳೆಯುವ ಸೂಚನೆಯನ್ನು ಮಾನ್ಯ ರುದ್ರಪ್ಪ ಮಾನಪ್ಪ ಲಮಾಣಿಯವರು ಪ್ರಸ್ತಾಪಿಸಬೇಕು.

14. ವಿಷಯ: ಹಾವೇರಿ ತಾಲ್ಲೂಕು ಕರ್ಜಗಿ ಮತ್ತು ಕೋಳೂರು ಗ್ರಾಮದಲ್ಲಿ ಬೆಂಕಿ ಅನಾಹುತದಿಂದ ನಷ್ಟವುಂಟಾಗಿರುವ ಬಡ ರೈತರಿಗೆ ಪರಿಹಾರ ನೀಡುವ ಬಗ್ಗೆ.

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಹಾವೇರಿ): ಮಾನ್ಯ ಅಧ್ಯಕ್ಷರೆ, ಹಾವೇರಿ ತಾಲ್ಲೂಕು ಕರ್ಜಗಿ ಮತ್ತು ಕೋಳೂರು ಗ್ರಾಮದಲ್ಲಿ ಬೆಂಕಿ ಅನಾಹುತದಿಂದ ನಷ್ಟವುಂಟಾಗಿರುವ ಬಡ ರೈತರಿಗೆ ಪರಿಹಾರ ನೀಡುವ ಬಗ್ಗೆ ಮಾನ್ಯ ಕೃಷಿ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನೆ ಸಚಿವರು) (ಕೃಷಿ ರಾಜ್ಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಹಾವೇರಿ ತಾಲೂಕಿನ ಕರ್ಜಗಿ ಗ್ರಾಮದಲ್ಲಿ ದಿ: 21–01–2014 ರಂದು ಸಂಜೆ 6.45 ಗಂಟೆಗೆ ಕ್ಯಾಂಟರ್ ಗಾಡಿ ಸಂಖ್ಯೆ: ಕೆ.ಎ.–16–ಎ–616, ರೈತರ ಗೋವಿನಜೋಳದ ಕಾಳುಗಳನ್ನು ಮಾರುಕಟ್ಟೆಗೆ ಸಾಗಿಸಲು ಪೂರ್ತಿ ತುಂಬಿಕೊಂಡು ನಿಂತಿದ್ದು, ಸದರಿ ನಿಂತ ಗಾಡಿಯನ್ನು ದೂಡಿ ಚಾಲು ಮಾಡುವಾಗ ಬೆಂಕಿ ಕಿಡಿಯಿಂದ, ಪಕ್ಕದಲ್ಲೇ ಇದ್ದ ಗೋವಿನ ಜೋಳದ ಹೊಟ್ಟಿನ ಬಣವೆಗೆ ಹಾಗೂ ಗೋವಿನಜೋಳದ ತೆನೆ ರಾಶಿಗೆ ಆಕಸ್ಮಿಕ ಬೆಂಕಿ ಹತ್ತಿಕೊಂಡು ಗೋವಿನ ಜೋಳದ ರಾಶಿ ಹಾಗೂ ಹೊಟ್ಟು ಸುಟ್ಟು ನಾಶವಾಗಿರುವುದಾಗಿ ವರದಿಯಾಗಿರುತ್ತದೆ.

ದಿನಾಂಕ: 21.01.2014 ಹಾಗೂ ದಿನಾಂಕ: 22–01–2014 ರಂದು ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳು ಕರ್ಜಗಿ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಆಕಸ್ಮಿಕ ಬೆಂಕಿ ತಗುಲಿದ ಗೋವಿನ ಜೋಳದ ಕಾಳು, ರಾಶಿ ಹಾಗೂ ಬಣವೆ ಹೊಟ್ಟು ನಾಶವಾದ ಬಗ್ಗೆ. ಪರಿಶೀಲಿಸಿರುತ್ತಾರೆ. ಅಗ್ನಿಶಾಮಕ ದಳದವರು ಸದರಿ ಸ್ಥಳಕ್ಕೆ ಆಗಮಿಸಿ, ಬೆಂಕಿ ನಂದಿಸಿ ಇನ್ನೂ ಹೆಚ್ಚಿನ ಹಾನಿಯಾಗದಂತೆ ತಡೆಗಟ್ಟಲು ಕ್ರಮ ಜರುಗಿಸಿರುತ್ತಾರೆ.

ಸದರಿಯ ಆಕಸ್ಮಿಕ ಬೆಂಕಿ ಪ್ರಕರಣದಲ್ಲಿ ಕರ್ಜಗಿ ಗ್ರಾಮದ ಇಪ್ಪತ್ತು ಮೂರು(23) ರೈತರ ಗೋವಿನಜೋಳದ ತೆನೆ ಹಾಗೂ ಗೋವಿನಜೋಳದ ಕಾಳು ಹಾನಿಯಾದ ಬಗ್ಗೆ ಅರ್ಜಿಗಳನ್ನು ಕಂದಾಯ ಇಲಾಖೆಗೆ ರೈತರು ಸಲ್ಲಿಸಿರುತ್ತಾರೆ.

ಸದರಿ ಆಕಸ್ಮಿಕ ಬೆಂಕಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯು ನಿಯಮಾನುಸಾರ ಪರಿಶೀಲಿಸಿ ವರದಿ ನೀಡಿದ ನಂತರ ರೈತರಿಗೆ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ: ಮಾನ್ಯ ಅಧ್ಯಕ್ಷರೆ, ಗೋವಿನ ಜೋಳದ ರಾಶಿಗೆ ಬೆಂಕಿ ಬಿದ್ದು ಬಣವೆಗಳೆಲ್ಲಾ ಸುಟ್ಟಿವೆ. ಅದಕ್ಕೆ ಸೂಕ್ತ ಪರಿಹಾರ ಕೊಡಬೇಕೆಂದು ಕೇಳಿದ್ದೇನೆ. ಎರಡು ಊರುಗಳಿಗೆ ಸಂಬಂಧಪಟ್ಟಂತೆ ಕೇಳಿದ್ದೆ. ಒಂದೇ ಊರಿನ ಬಗ್ಗೆ ಮಾತ್ರ ಉತ್ತರ ಕೊಟ್ಟಿದ್ದಾರೆ. ಇನ್ನೊಂದು ಊರಿನ ಬಗ್ಗೆ ಏನೂ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು: ಇನ್ನೊಂದು ಊರಿನ ಬಗ್ಗೆಯೂ ಬೇಗನೆ ಮಾನ್ಯ ಸಚಿವರು ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದೇನೆ. ಈಗ Assistant Commissioner ರವರ ಅಧ್ಯಕ್ಷತೆಯಲ್ಲಿ ಇರತಕ್ಕ ಸಮಿತಿಯವರು ಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು: Immediate ಆಗಿ ಪರಿಹಾರ ಕೊಡಲಿಕ್ಕೆ ಅವರಿಗೆ ಹೇಳಿ. ಒಂದು ಊರಿಗೆ ಕೊಟ್ಟು, ಇನ್ನೊಂದು ಊರಿಗೆ ಏಕೆ ಕೊಟ್ಟಿಲ್ಲ? ಈ ಬಗ್ಗೆ ನೋಡಿ. ಈಗ ಮಾನ್ಯ ಕೃಷಿ ಸಚಿವರು ಬಂದಿದ್ದಾರೆ. ಅವರೇ ಉತ್ತರ ಹೇಳಲಿ.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ತಕ್ಷಣವೇ ಅವರಿಗೆ ಪರಿಹಾರ ಕೊಡಿಸುತ್ತೇವೆ.

ಅಧ್ಯಕ್ಷರು: Very good. ಮಾನ್ಯ ಸದಸ್ಯರು ಊರಿಗೆ ಹೋಗುವುದರೊಳಗಾಗಿ ಪರಿಹಾರ ಕೊಡುತ್ತಾರೆ. ಅವರು ಪರಿಹಾರ ಕೊಡದಿದ್ದಲ್ಲಿ ನನ್ನ ಗಮನಕ್ಕೆ ತನ್ನಿ. ಮುಂದಿನ ಗಮನ ಸೆಳೆಯುವ ಸೂಚನೆ ಪ್ರಸ್ತಾಪಿಸಬೇಕಾದ ಮಾನ್ಯ ಗುರು ಪಾಟೀಲ್ ಶಿರವಾಳರವರು ಸದನದಲ್ಲಿ ಇಲ್ಲ. ಮುಂದಿನ ಗಮನ ಸೆಳೆಯುವ ಸೂಚನೆ ಮಾನ್ಯ ವಿ. ಸುನೀಲ್ ಕುಮಾರ್ ಅವರದ್ದಾಗಿದೆ. ಇದು ಇಂದಿನ ಅವರ ಎರಡನೇ ಗಮನ ಸೆಳೆಯುವ ಸೂಚನೆಯಾಗಿದೆ, ಆದ್ದರಿಂದ ಇದನ್ನು ತೆಗೆದುಕೊಳ್ಳುವುದಿಲ್ಲ. ಮುಂದಿನ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪಿಸಬೇಕಾದ ಮಾನ್ಯ ಮಾನಪ್ಪ ಡಿ. ವಜ್ಜಲ ಮತ್ತು ಮಾನ್ಯ ಎಲ್.ಎ. ರವಿ ಸುಬ್ರಮಣ್ಯರವರು ಸದನದಲ್ಲಿ ಇಲ್ಲ.

ಈಗ ಮಾನ್ಯ ಮಂಜುರವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪಿಸಬೇಕು.

15. ವಿಷಯ: ರಾಜ್ಯದಲ್ಲಿನ ಕ್ಲಬ್/ಸಂಸ್ಥೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಸದನ ಸಮಿತಿ ಸಲ್ಲಿಸಿರುವ ಮಧ್ಯಂತರ ವರದಿಯ ಕುರಿತು ಕೈಗೊಂಡ ಕ್ರಮದ ಬಗ್ಗೆ.

ಶ್ರೀ ಎ. ಮಂಜು (ಅರಕಲಗೂಡು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿನ ಕ್ಲಬ್/ಸಂಸ್ಥೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಸದನ ಸಮಿತಿ ಸಲ್ಲಿಸಿರುವ ಮಧ್ಯಂತರ ವರದಿಯ ಕುರಿತು ಕೈಗೊಂಡ ಕ್ರಮದ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ವಿ. ಶ್ರೀನಿವಾಸ ಪ್ರಸಾದ್, ಮಾನ್ಯ ಕಂದಾಯ ಸಚಿವರು ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬರುವ ಪ್ರತಿಷ್ಠಿತ ಕ್ಲಬ್‌ಗಳ ಕಾರ್ಯ ವೈಖರಿ ಕುರಿತು ಡಾ. ಹೇಮಚಂದ್ರ ಸಾಗರ್, ಮಾಜಿ ಶಾಸಕರು ಇವರ ಅಧ್ಯಕ್ಷತೆಯ ಸದನ ಸಮಿತಿಯು ಬೆಂಗಳೂರು ಹಾಗೂ ಮೈಸೂರು ನಗರದ ಪ್ರತಿಷ್ಠಿತ ಕ್ಲಬ್‌ಗಳ ಕಾರ್ಯವೈಖರಿಯ ಬಗ್ಗೆ ಅಧ್ಯಯನ ನಡೆಸಿ, ಮಧ್ಯಂತರ ವರದಿಯನ್ನು ಸಲ್ಲಿಸಿರುತ್ತದೆ.

ಈ ವರದಿಯಲ್ಲಿ ಒಟ್ಟು .8 ಶಿಫಾರಸ್ಸುಗಳನ್ನು ಸದನ ಸಮಿತಿಯು ಮಾಡಿದ್ದು, ಸದರಿ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕುರಿತು, ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಲು ಸಭೆಯನ್ನು ಕರೆದು ಕ್ರಮಕೈಗೊಳ್ಳಲಾಗುತ್ತಿದೆ.

ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಹಿಂದೆ ಸಮಿತಿಯನ್ನು ರಚಿಸಲಾಗಿತ್ತು. ಆ ಸಮಿತಿ ಮಧ್ಯಂತರ ವರದಿ ಸಲ್ಲಿಸಿ ಕೆಲವೊಂದು ಶಿಫಾರಸ್ಸುಗಳನ್ನು ಮಾಡಿದೆ. ಸಮಿತಿಯ ಶಿಫಾರಸ್ಸುಗಳ ಅನ್ವಯ ಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತಿದ್ದೇವೆ.